ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೊಂದನೆಯ ಅಧಿವೇಶನ

ಬುಧವಾರ, ದಿನಾಂಕ : 30 ನೇ ಸೆಪ್ಟೆಂಬರ್, 2020

ಕ್ರೈಸ್ ಸಂಸ್ಥೆಯ ಬೋಧಕರಿಗೆ ವಿಶೇಷ ವೇತನ ಬಡ್ತಿ ನೀಡುವ ಬಗ್ಗೆ

ಶ್ರೀ ಅರುಣ ಶಹಾಪುರ(ಶಿಕ್ಷಕರ ಕ್ಷೇತ್ರ) –

1013 (1183) ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಸಮಾಜ ಕಲ್ಯಾಣ ಇಲಾಖೆಯ ಕ್ರೈಸ್ ಸಂಸ್ಥೆಯ ವಸತಿ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಖಾಯಂ ಸಹ ಶಿಕ್ಷಕರಿಗೆ ಕುಮಾರ್ ನಾಯಕ್ ವರದಿಯನ್ವಯ ವಿಶೇಷ ವೇತನ ಬಡ್ತಿ ನೀಡುವಂತೆ ಪ್ರಸ್ತಾವನೆ ಎಂದಿನಿಂದ ಬಂದಿರುತ್ತದೆ;

(ಆ) ಈ ವಿಶೇಷ ವೇತನ ಬಡ್ತಿ ನೀಡಲು ಇರುವ ಸಮಸ್ಯೆಗಳೇನು ಹಾಗೂ ಕಾರಣಗಳೇನು; ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ಪ್ರಸ್ತಾವನೆ ಸಹಿತ ವಿವರಗಳನ್ನು ಒದಗಿಸುವುದು)

(ಇ) ವಿಶೇಷ ವೇತನ ಬಡ್ತಿ ನೀಡುವಂತೆ ನ್ಯಾಯಾಲಯದ ಆದೇಶಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಆ ಕುರಿತು ತೆಗೆದುಕೊಂಡ ಕ್ರಮಗಳೇನು? (ನ್ಯಾಯಾಲಯಗಳ ಆದೇಶದ ಪ್ರತಿ ಹಾಗೂ ಆದೇಶದನ್ವಯ ತೆಗೆದುಕೊಂಡ ಕ್ರಮಗಳ ಕುರಿತು ಸಂಪೂರ್ಣ ಮಾಹಿತಿ ನೀಡುವುದು)